## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು | : | ಡಾ|| ಉಮಾಶ್ರೀ<br>(ನಾಮ ನಿರ್ದೇಶನ ಹೊಂದಿದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 537 |
| ಉತ್ತರಿಸಬೇಕಾದ ದಿನಾಂಕ | : | 11.03.2025 |
| ಉತ್ತರಿಸಬೇಕಾದ ಸಚಿವರು | : | ಸಹಕಾರ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ನೇಕಾರರಿಗೆ "ಯಶಸ್ವಿನಿ" ಯೋಜನೆ ನೀಡಲಾಗುತ್ತಿದೆಯೇ; ಪ್ರತಿ ಕುಟುಂಬಕ್ಕೆ ಎಷ್ಟು ವಂತಿಗೆ ನೇಕಾರರು ನೀಡಬೇಕಾಗಿದೆ; | ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ನೇಕಾರರ ಸಹಕಾರ ಸಂಘಗಳು ಒಳಗೊಂಡಂತೆ ಯಾವುದೇ ಸಹಕಾರ ಸಂಘ/ಸ್ವ-ಸಹಾಯ ಸಂಘದ ಸದಸ್ಯರು ಮತ್ತು ಅವರ ಅರ್ಹ ಕುಟುಂಬ ಸದಸ್ಯರು ಯಶಸ್ವಿನಿ ಯೋಜನೆ ಸೌಲಭ್ಯ ಪಡೆಯಲು ಅರ್ಹರಿರುತ್ತಾರೆ. ಈ ಯೋಜನೆಯು ಒಂದು ಸ್ವಯಂ ಪ್ರೇರಿತ ಯೋಜನೆಯಾಗಿರುತ್ತದೆ.<br><br>ಸಹಕಾರ ಸಂಘಗಳ/ಸ್ವ-ಸಹಾಯ ಗುಂಪುಗಳ ಪ್ರತಿ ಕುಟುಂಬಕ್ಕೆ ವಾರ್ಷಿಕ ವಂತಿಗೆ (ಗರಿಷ್ಟ 4 ಜನರ ಕುಟುಂಬಕ್ಕೆ) : ಗ್ರಾಮೀಣ ಪ್ರದೇಶದವರಿಗೆ ರೂ.500/- ಮತ್ತು ನಗರ ಪ್ರದೇಶದವರಿಗೆ ರೂ.1,000/- ಹಾಗೂ ಪ್ರತಿ ಹೆಚ್ಚುವರಿ ಅವಲಂಬಿತ ಗ್ರಾಮೀಣ ಸದಸ್ಯರಿಗೆ ಹೆಚ್ಚುವರಿಯಾಗಿ ರೂ.100/- ಮತ್ತು ನಗರ ಪ್ರದೇಶದವರಿಗೆ ಹೆಚ್ಚುವರಿಯಾಗಿ ರೂ.200/- ಗಳನ್ನು ಪಾವತಿಸಬೇಕಾಗುತ್ತದೆ. |
| ಆ) | ಯಾವ ಯಾವ ಚಿಕಿತ್ಸೆ ಪಡೆಯಬಹುದಾಗಿದೆ.<br>ಇದುವರೆಗೂ ಎಷ್ಟು ಜನ ಈ ಸೌಲಭ್ಯವನ್ನು ಪಡೆದಿದ್ದಾರೆ; (2023 ರಿಂದ ಇಲ್ಲಿಯವರೆಗೂ ಮಾಹಿತಿ ನೀಡುವುದು) | ಪರಿಷ್ಕೃತ ಯಶಸ್ವಿನಿ ಯೋಜನೆಯನ್ನು ರಾಜ್ಯದಲ್ಲಿ 2022-23 ರಿಂದ ಮರುಜಾರಿಗೊಳಿಸಿದೆ. |

| | | |
|---|---|---|
| | | 2022-23ನೇ ಸಾಲಿನಲ್ಲಿ ನೋಂದಾಯಿಸಿದ ಸದಸ್ಯರಿಗೆ ಜನವರಿ 2023 ರಿಂದ ಮಾರ್ಚ್ 2024 ರವರೆಗೆ, 2023-24ನೇ ಸಾಲಿನಲ್ಲಿ ಯೋಜನೆಯಡಿ ನೋಂದಾಯಿಸಿದ ಸದಸ್ಯರಿಗೆ ಏಪ್ರಿಲ್ 2024 ರಿಂದ ಮಾರ್ಚ್ 2025 ರವರೆವಿಗೆ ಚಿಕಿತ್ಸೆಗೆ ಅವಕಾಶ ಕಲ್ಪಿಸಿದೆ.<br><br>ಯಶಸ್ವಿನಿ ಯೋಜನೆಯಡಿಯಲ್ಲಿ ಮುಖ್ಯವಾಗಿ ಹೃದಯಕ್ಕೆ ಸಂಬಂಧಿಸಿದ ರೋಗಗಳು, ಕಿವಿ, ಮೂಗು, ಗಂಟಲು ವ್ಯಾದಿಗಳು, ಕರುಳಿನ ಖಾಯಿಲೆಗಳು, ನರಗಳಿಗೆ ಸಂಬಂಧಿಸಿದ ಖಾಯಿಲೆಗಳು, ಕಣ್ಣಿನ ಖಾಯಿಲೆಗಳು, ಮೂಳೆ ರೋಗಗಳು, ಹೆರಿಗೆ ಹಾಗೂ ಸ್ತ್ರೀಯರಿಗೆ ಸಂಬಂಧಿಸಿದ ಖಾಯಿಲೆಗಳು ಮತ್ತು ಈ ಯೋಜನೆಯಡಿ ಇತರೆ ಅನುಸೂಚಿತ ಸಾಮಾನ್ಯ ರೋಗಗಳಿಗೆ ಸಂಬಂಧಿಸಿದಂತೆ ಒಟ್ಟು 1650 ಮೂಲ ಚಿಕಿತ್ಸೆಗಳು ಮತ್ತು 478 ಪೂರಕ ಚಿಕಿತ್ಸೆಗಳಾದ ICU ಮತ್ತು HDU ಚಿಕಿತ್ಸೆಗಳೂ ಸೇರಿ ಒಟ್ಟು 2128 ಚಿಕಿತ್ಸಾ ಸೌಲಭ್ಯಗಳನ್ನು ರಾಜ್ಯದ ಯಶಸ್ವಿನಿ ನೆಟ್‌ವರ್ಕ್ ಆಸ್ಪತ್ರೆಗಳಲ್ಲಿ ಒದಗಿಸಲಾಗುವುದು.<br><br>2023-24ನೇ ಸಾಲಿನಲ್ಲಿ ಯೋಜನೆಯಡಿ ಕ್ರಮವಾಗಿ ಒಟ್ಟು 66,279 ಫಲಾನುಭವಿಗಳು ರೂ.108.75 ಕೋಟಿ ಮೊತ್ತದ ಚಿಕಿತ್ಸೆಯನ್ನು ಹಾಗೂ 2024-25ನೇ ಸಾಲಿನಲ್ಲಿ ಇಲ್ಲಿಯವರೆಗೆ (ಫೆಬ್ರುವರಿ ಅಂತ್ಯದವರೆಗೆ) ಸುಮಾರು 63,000 ಫಲಾನುಭವಿಗಳು ಸುಮಾರು ರೂ.107.50 ಕೋಟಿ ಮೊತ್ತದ ಚಿಕಿತ್ಸೆಯನ್ನು ಪಡೆದಿರುತ್ತಾರೆ. |

| | | |
|---|---|---|
| ಇ) | ಎಷ್ಟು ಜನ ನೇಕಾರರ ಮಹಿಳೆಯರಿಗೆ ಈ ಸೌಲಭ್ಯ ದೊರೆತಿದೆ (ಜಿಲ್ಲಾವಾರು ಮಾಹಿತಿ ನೀಡುವುದು) | 2023-24 ನೇ ಸಾಲಿನಲ್ಲಿ 139 ಮಹಿಳಾ ನೇಕಾರರು ರೂ.17.03 ಲಕ್ಷ ಮೊತ್ತದ ಚಿಕಿತ್ಸೆಯನ್ನು ಹಾಗೂ 2024-25ನೇ ಸಾಲಿನಲ್ಲಿ (ಫೆಬ್ರುವರಿ ಅಂತ್ಯದವರೆಗೆ) 83 ಮಹಿಳಾ ನೇಕಾರರು ರೂ.15.20 ಲಕ್ಷ ಮೊತ್ತದ ಚಿಕಿತ್ಸೆಯನ್ನು ಪಡೆದಿರುತ್ತಾರೆ. ಅಂದರೆ ಎರಡು ವರ್ಷಗಳಲ್ಲಿ ಒಟ್ಟು 222 ಮಹಿಳಾ ನೇಕಾರರು 32.23 ಲಕ್ಷ ಮೊತ್ತದ ಚಿಕಿತ್ಸೆಯನ್ನು ಪಡೆದಿರುತ್ತಾರೆ.<br><br>ಜಿಲ್ಲಾವಾರು ಮಾಹಿತಿ **ಅನುಬಂಧ**ದಲ್ಲಿ ನೀಡಲಾಗಿದೆ. |
| ಈ) | ನೇಕಾರರು ಕಟ್ಟುವ ವಂತಿಗೆಯನ್ನು ಸರ್ಕಾರವೇ ಭರಿಸಲು ಏನಾದರೂ ಚಿಂತೆ ಸರ್ಕಾರಕ್ಕಿದೆಯೇ? | ಪ್ರಸ್ತುತ ಯಶಸ್ವಿನಿ ಯೋಜನೆಯಡಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಸದಸ್ಯರ ವಂತಿಗೆಯನ್ನು ಸರ್ಕಾರದಿಂದ ಭರಿಸಲಾಗುತ್ತಿದೆ. ಇತರೆ ವರ್ಗದವರಿಗೆ ವಂತಿಗೆಯನ್ನು ಭರಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ. |

**ಸಂಖ್ಯೆ: ಸಿಒ 79 ಸಿಎಲ್‌ಎಸ್ 2025**

K.N. Rajanna

**(ಕೆ.ಎನ್.ರಾಜಣ್ಣ)**
ಸಹಕಾರ ಸಚಿವರು

**Annexure 1**

**Yeshasvini Scheme - District Wise Weavers Cooperative Societies Treatment Details From 2023-24 & 2024-25(Up to end of Feb 2025)**

| S.No | Districts | 2023-24 | | | | 2024-25 | | | | Grand Total | | | |
|---|---|---|---|---|---|---|---|---|---|---|---|---|---|
| | | Female | | Male | | Female | | Male | | Female | | Male | |
| | | No. | Amount | No. | Amount | No. | Amount | No. | Amount | No. | Amount | No. | Amount |
| 1 | Bagalkot | 41 | 4,23,500 | 36 | 3,33,000 | 27 | 2,85,000 | 27 | 3,16,500 | 68 | 7,08,500 | 63 | 6,49,500 |
| 2 | Bangalore Rural | 4 | 30,000 | 4 | 1,02,500 | 0 | 0 | 8 | 1,10,000 | 4 | 30,000 | 12 | 2,12,500 |
| 3 | Bangalore Urban | 24 | 4,02,600 | 26 | 3,91,600 | 7 | 59,200 | 12 | 2,25,950 | 31 | 4,61,800 | 38 | 6,17,550 |
| 4 | Bidar | 0 | 0 | 0 | 0 | 2 | 1,28,000 | 0 | 0 | 2 | 1,28,000 | 0 | 0 |
| 5 | Chamarajnagar | 3 | 37,500 | 8 | 65,200 | 4 | 92,900 | 3 | 62,400 | 7 | 1,30,400 | 11 | 1,27,600 |
| 6 | Chikkaballapur | 2 | 21,500 | 0 | 0 | 0 | 0 | 0 | 0 | 2 | 21,500 | 0 | 0 |
| 7 | Chitradurga | 10 | 2,27,800 | 6 | 1,71,200 | 2 | 17,500 | 9 | 1,30,350 | 12 | 2,45,300 | 15 | 3,01,550 |
| 8 | Dakshina Kannada | 2 | 29,000 | 0 | 0 | 2 | 25,400 | 1 | 3,600 | 4 | 54,400 | 1 | 3,600 |
| 9 | Davangere | 8 | 61,000 | 7 | 51,000 | 2 | 15,000 | 2 | 15,000 | 10 | 76,000 | 9 | 66,000 |
| 10 | Gadag | 15 | 1,49,500 | 5 | 37,500 | 10 | 3,19,500 | 3 | 58,750 | 25 | 4,69,000 | 8 | 96,250 |
| 11 | Hassan | 2 | 36,000 | 4 | 2,00,000 | 4 | 1,23,300 | 4 | 45,000 | 6 | 1,59,300 | 8 | 2,45,000 |
| 12 | Haveri | 4 | 26,850 | 0 | 0 | 4 | 30,000 | 1 | 7,500 | 8 | 56,850 | 1 | 7,500 |
| 13 | Kalaburagi | 0 | 0 | 0 | 0 | 0 | 0 | 1 | 7,500 | 0 | 0 | 1 | 7,500 |
| 14 | Kodagu | 1 | 15,000 | 0 | 0 | 0 | 0 | 0 | 0 | 1 | 15,000 | 0 | 0 |
| 15 | Koppal | 2 | 15,000 | 3 | 22,500 | 3 | 22,500 | 2 | 15,000 | 5 | 37,500 | 5 | 37,500 |
| 16 | Mandya | 1 | 20,000 | 1 | 15,000 | 1 | 11,000 | 1 | 7,500 | 2 | 31,000 | 2 | 22,500 |
| 17 | Mysore | 0 | 0 | 0 | 0 | 1 | 20,000 | 0 | 0 | 1 | 20,000 | 0 | 0 |
| 18 | Ramanagara | 7 | 85,100 | 9 | 2,01,600 | 4 | 69,000 | 2 | 13,000 | 11 | 1,54,100 | 11 | 2,14,600 |
| 19 | Shimoga | 0 | 0 | 1 | 7,500 | 0 | 0 | 0 | 0 | 0 | 0 | 1 | 7,500 |
| 20 | Tumkur | 4 | 53,500 | 4 | 30,500 | 3 | 2,24,000 | 14 | 1,97,500 | 7 | 2,77,500 | 18 | 2,28,000 |
| 21 | Udupi | 3 | 22,500 | 2 | 32,500 | 2 | 28,000 | 1 | 14,000 | 5 | 50,500 | 3 | 46,500 |
| 22 | Vijayanagara | 6 | 46,500 | 4 | 30,000 | 4 | 42,500 | 4 | 30,000 | 10 | 89,000 | 8 | 60,000 |
| 23 | Yadgir | 0 | 0 | 0 | 0 | 1 | 7,500 | 0 | 0 | 1 | 7,500 | 0 | 0 |
| | **Grand Total** | **139** | **17,02,850** | **120** | **16,91,600** | **83** | **15,20,300** | **95** | **12,59,550** | **222** | **32,23,150** | **215** | **29,51,150** |